ಯಾವ್ಯಾವುದು ಎಂದರೆ ಬಿಜ್ಜೋಳಿ–ಹಗೇರಿಗೆ ಹೋಗುವ ಒಂದು ರಸ್ತೆ, ಹಾಸನ ತಾಲ್ಲೂಕು ಕಂಡಿ, ಹಾಸನ ಮಂಗಳೂರು ರೋಡ್ ರಸ್ತೆ ಇನ್ನೊಂದು ಪಡುವಳ್ಳಿ ಮಡಗೋಡ್ ರಸ್ತೆ; ಈ ಮೂರು ರಸ್ತೆಗಳನ್ನೂ ಈ ವರ್ಷ ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಸ್. ಬಂಗಾರಪ್ಪ.—ಒಟ್ಟು ಎಷ್ಟು ಕಿಲೋ ಮೀಟರ್ ಆಗುತ್ತದೆ ?

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ.—ಹಾಸನ ಮಂಗಳೂರು ರೋಡ್ ೧೦ ಮೈಲಿ ಆಗುತ್ತದೆ ಇನ್ನೊಂದು ಬಿಜ್ಜೋಳಿ–ಹಗೇರಿ ರಸ್ತೆ, ಅದು ಬೇಲೂರು ಹಾಸನ ರಸ್ತೆ ೫ ಮೈಲಿ ಆಗುತ್ತದೆ. ಇನ್ನೊಂದು ಪಡುವಳ್ಳಿ–ಮಡಗೋಡ್ ರಸ್ತೆ ಅದು ಬೇಲೂರು ಸಕಲೇಶಪುರದ ರೋಡ್ ೭ ಮೈಲಿ ಆಗುತ್ತದೆ. ಆ ೭ ಮೈಲಿಯಲ್ಲಿ ೪ ಮೈಲಿ ಮಾಡಿದ್ದಾರೆ. ಇದರಲ್ಲಿ ೮–೯ ಮೈಲಿ ಮಾಡಿದ್ದಾರೆ.

ಅಧ್ಯಕ್ಷರು.—ತಾವು ಸ್ವಲ್ಪ ಸಂಕ್ಷೇಪವಾಗಿ ಎಷ್ಟು ಕಿಲೋ ಮೀಟರ್ ರಸ್ತೆ ಆಗಬೇಕು ಅನ್ನುವುದನ್ನು ಹೇಳಿ.

ಶ್ರೀ ಎಸ್. ಬಂಗಾರಪ್ಪ.— ಎಷ್ಟು ಮೈಲಿಯುದ್ದದ ರಸ್ತೆ ಕೆಲಸವಾಗದೆ ಉಳಿದಿದೆ ಎಂದು ಮಾನ್ಯ ಸದಸ್ಯರು ಹೇಳಿದರೆ ನಾನು ಅದನ್ನು ನೋಡಿಕೊಂಡು ಉತ್ತರ ಕೊಡುವುದಕ್ಕೆ ಸಾಧ್ಯವಾಗುತ್ತದೆಂದು ಹೇಳಿದೆ. ಈಗ ಆಗಿರುವ ಭಾಗವನ್ನು ಬಿಟ್ಟು, ಆಗಬೇಕಾದ ರಸ್ತೆಯ ಉದ್ದವನ್ನು ತಿಳಿಸಿದರೆ ಒಳ್ಳೆಯದು.

ಶ್ರೀ ಬಿ. ಎಚ್. ಲಕ್ಷ್ಮಣಯ್ಯ.—ಮೂರು ರಸ್ತೆಗಳೂ ಸೇರಿ ಸುಮಾರು ಹದಿನೈದು ಕಿಲೋ ಮೀಟರಿನ ಒಳಗಡೆ ಇದೆ.

ಶ್ರೀ ಎಸ್. ಬಂಗಾರಪ್ಪ.—ಸುಮಾರು ಐದಾರು ಕಿಲೋ ಮೀಟರು ರಸ್ತೆಗಳು ಆಗುವುದಿದ್ದರೆ ದಯವಿಟ್ಟು ಸರ್ಕಾರಕ್ಕೆ ತಿಳಿಸಿರೆಂದು ಮಾನ್ಯ ಸದಸ್ಯರುಗಳಿಗೆ ನಾನು ಪತ್ರ ಬರೆದಿದ್ದೇನೆ. ಆದೇ ರೀತಿ, ಮಾನ್ಯ ಲಕ್ಷ್ಮಣಯ್ಯನವರಿಂದಲೂ ಈ ಮಾಹಿತಿಯನ್ನು ತಿಳಿಸಿದ ಪತ್ರ ನನಗೆ ಬಂದಿದ್ದರೆ, ಅದರ ಜೊತೆಗೆ ಇದನ್ನೂ ಸೇರಿಸಿ, ಆದಷ್ಟು ಶೀಘ್ರವಾಗಿ ಮಾಡಿಸಿಕೊಡುವುದಕ್ಕೆ ಪ್ರಯತ್ನ ಮಾಡಲಾಗುವುದು.

ಅಧ್ಯಕ್ಷರು.—ಶ್ರೀ ಎಂ. ಜೆ. ಜರತಾರಗರ್ ಅವರ ಪ್ರಶ್ನೆ ನಂ. ೪೭೦ ತಡೆಹಿಡಿಯಲಾಗಿದೆ.

ಶ್ರೀ ಕೆ. ಎಂ. ತಮ್ಮಯ್ಯ,—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಯೇ ಬೇರೆ, ಇಲ್ಲಿ ಉತ್ತರವಾಗಿ ಬಂದಿರುವ ಪ್ರಶ್ನೆ ನಂ. ೪೮೫ ಪ್ರಶ್ನೆಯೇ ಬೇರೆ. ಈಗ ಉತ್ತರವಾಗಿ ಬಂದಿರುವುದು ನನ್ನ ಎರಡನೆಯ ಪ್ರಶ್ನೆ. ಯಾವುದಕ್ಕೆ ಸರ್ಕಾರದಿಂದ ಉತ್ತರ ಬರಬೇಕಾಗಿತ್ತೋ ಅದು ಬಂದಿಲ್ಲ.

ಅಧ್ಯಕ್ಷರು.—ಈಗ ತಾವು ಈ ಪ್ರಶ್ನೆಯನ್ನು ಕೇಳುವುದಿಲ್ಲವೆ ?

ಶ್ರೀ ಕೆ. ಎಂ. ತಮ್ಮಯ್ಯ.—ಇಲ್ಲ.

ಅಧ್ಯಕ್ಷರು.—ಹಾಗಾದರೆ, ಸರಿ. ಬೇರೆ ಪ್ರಶ್ನೆ ತೆಗೆದುಕೊಳ್ಳೋಣ.

Government to meet Establishment Charges of Local Bodies

722. SRI I.P.D. SALAPPA (Binnipet).—Will the Municipal Administration be pleased to state :

(a) whether the Government is aware that many Local Bodies are financially weak and that they cannot meet the Establishment Charges ;

(b) if so, whether the Government intend to meet the Establishment Charges of such Local Bodies whose finances are so meagre that they cannot implement the Service Benefits of the Employees and Pourakarmikas sanctioned by the Government from time to time ?

SRI H.C. SRIKANTAIAH (Minister for Municipal Administration).—

(a) Yes.

(b) No.

ಶ್ರೀ ಐ. ಪಿ. ಡಿ. ಸಾಲಪ್ಪ.—ಇಲ್ಲಿ ಒದಗಿಸಿರುವ ಉತ್ತರದಂತೆ, ಸ್ಥಳೀಯ ಸಂಸ್ಥೆಗಳಲ್ಲಿ ಹಣದ ಮುಗ್ಗಟ್ಟಿರುವುದರಿಂದ ಅಲ್ಲಿ ಕೆಲಸ ಮಾಡುತ್ತಿರುವ ನೌಕರರಿಗೆ ಮತ್ತು ಪೌರ ಕಾರ್ಮಿಕರಿಗೆ ಸಂಬಳ ಕೊಡದೆ ಇರುವ ಪರಿಸ್ಥಿತಿ ಇರುವುದನ್ನು ಸರ್ಕಾರ ಒಪ್ಪಿದೆ. ಅನೇಕ ಮುನಿಸಿಪಾಲಿಟಿಗಳಲ್ಲಿ ಹಣದ ಮುಗ್ಗಟ್ಟಿನ ದೆಸೆಯಿಂದಾಗಿ ಸರ್ಕಾರ ಹೊರಡಿಸಿರುವ ಆಜ್ಞೆಯೊಂದನ್ನೂ ಅವರು ಜಾರಿಗೆ ಕೊಡುವುದ ಕ್ಕಾಗುವುದಿಲ್ಲ, ವಿಶ್ರಾಂತಿ ವೇತನ, ಗ್ರಾಚುಯಿಟಿ, ಡ್ರೆಸ್, ಸೋಪು–ಇವುಗಳೊಂದನ್ನೂ ನೀಡುತ್ತಿಲ್ಲ. ಕಾರಣ ಕೇಳಿದರೆ, ಮುನಿಸಿಪಾಲಿಟಿಯವರು ಹಣದ ಮುಗ್ಗಟ್ಟು ಎಂದು ಹೇಳುತ್ತಾರೆ. ಆದರೆ ಸರ್ಕಾರ ಆಜ್ಞೆ ಹೊರಡಿಸುವುದು ''ಮಾಡಿದರೆ ಮಾಡಿ, ಬಿಟ್ಟರೆ ಬಿಡಿ'' ಎನ್ನುವ ಅರ್ಥದಿಂದಲೋ ಅಥವಾ ಆಜ್ಞೆಯನ್ನು ಜಾರಿಗೆ ಕೊಡಲೇಬೇಕೆನ್ನುವ ಉದ್ದೇಶದಿಂದಲೊ?

† ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಸರ್ಕಾರ ಹೊರಡಿಸಿರುವ ಆಜ್ಞೆಯ ಪ್ರಕಾರ ಯಾವ ಯಾವ ಮುನಿಸಿಪಾಲಿಟಿಗಳು ಸೌಲಭ್ಯಗಳನ್ನು ನೀಡುತ್ತಿಲ್ಲವೆಂಬುದನ್ನು ಮಾನ್ಯ ಸದಸ್ಯರು ಸರ್ಕಾರದ ಗಮನಕ್ಕೆ ತಂದರೆ, ಅದನ್ನು ಪರಿಶೀಲನೆ ಮಾಡಲಾಗುವುದು.

ಶ್ರೀ ಐ. ಪಿ. ಡಿ. ಸಾಲಪ್ಪ.—ಇದು ಎಲ್ಲಾ ಮುನಿಸಿಪಾಲಿಟಿಗಳಲ್ಲೂ ನಡೆಯುತ್ತಿದೆ. ಮಾನ್ಯ ಸಚಿವರ ಊರಿನ ಮುನಿಸಿಪಾಲಿಟಿಯಲ್ಲೂ ಕೊಡುತ್ತಿಲ್ಲ ಬಹುಶ: ಇದು ಅವರಿಗೂ ತಿಳಿದಿರಬಹುದು. ತಿಳಿದಿರದಿದ್ದರೆ ಅಲ್ಲಿಂದ ವಿವರವನ್ನು ತರಿಸಿಕೊಳ್ಳಬಹುದು. ಮಂತ್ರಿಗಳ ಊರಿನ ಮುನಿಸಿಪಾಲಟಿಯಲ್ಲೆ ಕೊಡದೇ ಇರುವಾಗ ಇನ್ನು ಬೇರೆ ಊರಿನ ಮುನಿಸಿಪಾಲಿಟಿಗಳಲ್ಲಿ ಕೊಡುತ್ತಿಲ್ಲವೆಂದು ಬೇರೆ ಹೇಳಬೇಕೆ? ಮಾನ್ಯ ಸಚಿವರು ಇದರ ಬಗ್ಗೆ ಏನಾದರೂಂದು ವ್ಯವಸ್ಥೆ ಮಾಡಬೇಕು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಂತ್ರಿಗಳ ಊರಿನ ಮುನಿಸಿಪಾಲಿಟಿಯಲ್ಲಿ ಕೊಡದೆ ಇರುವುದು ಮಂತ್ರಿಗಳ ಗಮನಕ್ಕೇ ಬಂದಿಲ್ಲ. ಅಂತಹ ವಿಚಾರ ಮಾನ್ಯ ಸದಸ್ಯರ ಗಮನಕ್ಕೆ ಬಂದಿದ್ದರೆ ಅದನ್ನು ನಾನು ಪರಿಶೀಲನೆ ಮಾಡುತ್ತೇನೆ.

ಶ್ರೀ ಐ. ಪಿ. ಡಿ. ಸಾಲಪ್ಪ.—ಈಗಲೂ ಸರ್ಕಾರದ ಗಮನಕ್ಕೆ ನಾನು ತರಬಯಸುತ್ತೇನೆ ಅದನ್ನು ಸರಿಪಡಿಸುವುದಕ್ಕೆ ತಾವು ಆಶ್ವಾಸನೆ ನೀಡುವಿರಾ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಆದಷ್ಟು ಮಟ್ಟಿಗೆ ಸರಿಪಡಿಲಾಗುವುದು.

Houses provided to Government Employees in Gulbarga City.

784. SRI M. Y. PATIL (Afzalpur).—Will the Minister for Public Works be pleased to state:

(a) the number of houses provided to Government employees in Gulbarga City ;

(b) whether those houses have been provided to the employees of all the Department ;

(c) if so, the number of houses provided to the employees/Department wise information be furnished ?

SRI S. BANGARAPPA (Minister for Public Works),—

(a) 1272.

(b) Yes.

(c) Statement appended.